ಹೆಸರಾದ ಒಂದು ಕ್ಷೇತ್ರದಲ್ಲಿ ಎಲ್ಲಾ ವಿಧಿಗಳನ್ನೂ ಪೂರೈಸಿದ ರಾಮಚಂದ್ರ. ಅವನ ತಲೆ ಕೆಲಸ ಮಾಡುವುದನ್ನೇ ನಿಲ್ಲಿಸಿ ಬಿಟ್ಟಿತ್ತು ಅನ್ನುವಂತೆ ಪುರೋಹಿತರು ಹೇಳಿದಷ್ಟನ್ನು, ಹೇಳಿದಂತೆ ಪೂರೈಸುತ್ತಾ, ಕೀಲಿ ಕೊಟ್ಟ ಗೊಂಬೆಯಂತಾಗಿಬಿಟ್ಟಿದ್ದ ರಾಮಚಂದ್ರ. ಕುಟುಂಬದ ಒಬ್ಬ ಪ್ರಮುಖ ಸದಸ್ಯನನ್ನು ಶಾಶ್ವತವಾಗಿ ಕಳೆದುಕೊಂಡ ಮನೆಯಲ್ಲಿ ಯಾರು ಹೆಚ್ಚು ತಬ್ಬಲಿಗಳಾಗಿದ್ದು? ತುಂಬುಪ್ರಾಯದಲ್ಲಿ ಗಂಡನನ್ನು ಕಳೆದುಕೊಂಡ ಹೆಂಡತಿ? ಎಳೆವಯಸ್ಸಿನಲ್ಲಿ ಅಪ್ಪನನ್ನು ಕಳೆದುಕೊಂಡ ಮಗ? ಇಳಿವಯಸ್ಸಿನಲ್ಲಿ ಮಗನನ್ನು ಕಳೆದುಕೊಂಡು ಪುತ್ರಶೋಕದಲ್ಲಿ ನಬೆಯುತ್ತಿರುವ ತಾಯಿ? ಈ ಅನಿರೀಕ್ಷಿತ ದುರ್ಘಟನೆಯಿಂದ ಮೇಲ್ನೋಟಕ್ಕೆ ರಾಮಚಂದ್ರನ ಬದುಕಿನ ಮೇಲೆ ಹೆಚ್ಚಿನ ಪರಿಣಾಮ ಆಗಲಾರದೆಂದು ಅನಿಸುತ್ತಿದ್ದರೂ ವಾಸ್ತವವಾಗಿ ಅವನ ವೈಯಕ್ತಿಕ ಜೀವನದ ಮೇಲೆ ಉಂಟಾದ ಪರಿಣಾಮ ಊಹಾತೀತ. ಹೀಗಾಗಲು ಸಾಧ್ಯವೇ? ಅನಿಸಿದ್ದರೂ ಆಗಿದ್ದು ನಿಜ. ಈ ಮನೆಗೆ ಯಾವುದೋ ದುರದೃಷ್ಟ ಹಿಡ್ಕಂಡಿದೆ ಎಂದು ಹಲುಬುತ್ತಿದ್ದರು ರಾಧಮ್ಮ. ಗಂಡ ನೋಡಿದರೆ ಅರೆ ಆಯುಸ್ಸಿನಲ್ಲಿ ಕೈ ಬೀಸಿಕೊಂಡು ಹೊರಟು ಬಿಟ್ಟರು. ಪ್ರಾಯದ ಬಿಸಿ ರಕ್ತ ಇತ್ತು. ಏನೋ ಹಟ ತೊಟ್ಟವರಂತೆ ಉಸಿರು ಬಿಗಿ ಹಿಡಿದು ಬಂಡಿ ಎಳೆದರು ರಾಧಮ್ಮ. ಈಗ ನೋಡಿದರೆ ಮಗನ ಅಪಮೃತ್ಯು. ಏನಾಗಿದೆ ಈ ಮನೆಗೆ? ಏನಾಗಿದೆ? ಅಪ್ಪ ಬಸ್ಸಡಿ ಬಿದ್ದು ಸತ್ಹೋದ ಎಂದು ಅಮಾಯಕವಾಗಿ ಹೇಳುತ್ತಾ ಓಡಾಡಿಕೊಂಡಿದ್ದ ಮೊಮ್ಮಗನನ್ನು ನೋಡುತ್ತಿದ್ದರೆ ಅವರ ಹೊಟ್ಟೆಗೆ ಬೆಂಕಿ ಬಿದ್ದಂತಾಗುತ್ತಿತ್ತು. ಚರಿತ್ರೆಯ ಪುನರಾವರ್ತನೆ ಎನ್ನುವ ದೊಡ್ಡ ಪದಗಳ ಹೇಳಿಕೆ ಮಾತು ಗೊತ್ತಿಲ್ಲದಿದ್ದರೂ ಹಳೆಯ ಕತೆ ಮರುಕಳಿಸಿತು ಅನಿಸುತ್ತಿತ್ತು ರಾಧಮ್ಮನಿಗೆ. ಇದು ಹೀಗೆಯೇ ಮುಂದುವರಿದರೆ ಎನ್ನುವ ಭಯ ಮೈಮೇಲೆ ಮುಳ್ಳೇಳುವಂತೆ ಮಾಡುತ್ತಿತ್ತು. ಸೊಸೆ ಭವಾನಿಯನ್ನು ಕಣ್ಣೆತ್ತಿ ನೋಡಲಾಗುತ್ತಿರಲಿಲ್ಲ ರಾಧಮ್ಮನಿಗೆ. ಕೋಣೆಯ ಮೂಲೆ ಸೇರಿಕೊಂಡಿದ್ದ ಅವಳು ಆ ಜಾಗ ಬಿಟ್ಟು ಈಚೆಗೆ ಬರುತ್ತಿರಲಿಲ್ಲ. ಅವಳಿಗೆ ತುತ್ತು ಅನ್ನ ತಿನ್ನಿಸಬೇಕಾದರೆ, ಗುಟುಕು ಕಾಫಿ ಕುಡಿಸಬೇಕಾದರೆ, ಭವಾನಿಯ ಅಮ್ಮನಿಗೆ ಆಕಾಶ, ಪಾತಾಳ ಒಂದು ಮಾಡಿದಂತಾಗುತ್ತಿತ್ತು. ಸಧ್ಯಕ್ಕೆ ಮನೆಯ ಹೊಣೆಯನ್ನು ಅವರು ಹೊತ್ತುಕೊಂಡಿದ್ದರಿಂದ ಏನೂ ಅರಿಯದ ಮೊಮ್ಮಗನ ಹೊಟ್ಟೆಗೆ ಕಾಲಕ್ಕೆ ಸರಿಯಾಗಿ ಅಶನ ಬೀಳುತ್ತಿತ್ತು. ತಾನು ಯಾರನ್ನು ಹಚ.., ಹಚಾ.. ಎನ್ನುವಂತೆ ಉಪೇಕ್ಷಾದೃಷ್ಟಿಯಿಂದ ನೋಡುತ್ತಿದ್ದೆನೋ ಅವರೇ ಆಪತ್ತಿಗೆ ಒದಗಿ ಬಂದ ಸ್ಥಿತಿ. ಅಮ್ಮನ ಪಶ್ಚಾತ್ತಾಪ ಅರ್ಥವಾಗುತ್ತಿತ್ತು ರಾಮಚಂದ್ರನಿಗೆ. ಎಂತಾ ಶೋಕವೂ ಕಾಲಕ್ರಮೇಣ ದಡ್ಡುಗಟ್ಟುತ್ತದೆ ಅನ್ನುವ ಸಂದರ್ಭ ಈ ಮನೆಯಲ್ಲಿ ಬರದಿದ್ದಕ್ಕೆ ಕಾರಣ ಅದು ಅಂತಿಂತಾ ಶೋಕವಲ್ಲ. ಪುತ್ರಶೋಕ.

ಗಾಯದ ಮೇಲೆ ಬರೆ ಎಳೆದ ಹಾಗೆ ಮಗನ ಮರಣಾನಂತರ ಆ ಏಟಿನಿಂದ ರಾಧಮ್ಮ ಚೇತರಿಸಿಕೊಳ್ಳುವ ಮುಂಚೆಯೇ ಅವರ ನಿರೀಕ್ಷೆಗೂ ಮೀರಿದ ಘಟನೆಗಳು ಮನೆಯಲ್ಲಿ ನಡೆದು ಹೋದುವು. ಈ ತಲೆಬಿಸಿಯಲ್ಲಿ ಮಡದಿ, ಮಕ್ಕಳನ್ನು ಹೋಗಿ ನೋಡುವುದಿರಲಿ, ಅವರನ್ನು ನೆನೆಸಿಕೊಳ್ಳಲೂ ಸಾಧ್ಯವಾಗದಷ್ಟು ಜಂಜಡದಲ್ಲಿ ಮುಳುಗಿ ಹೋದ ರಾಮಚಂದ್ರ. ಈ ಮುನ್ನಿನ ಹುಡುಗಾಟಿಕೆ, ಮೋಹಾವೇಗ, ಆಮೋದಪ್ರಮೋದಗಳು, ಪೊಳ್ಳು ಭ್ರಮೆ ಅನಿಸುವಷ್ಟರ ಮಟ್ಟಿಗೆ ಜೀವನ ಅವನಿಗೆ ಪಾಠ ಕಲಿಸಿತ್ತು. ಅಪ್ಪ ಸತ್ತಾಗ ಅವನು ಸಣ್ಣ ಹುಡುಗ. ತಬ್ಬಲಿತನದ ಕಲ್ಪನೆ ಅವನಿಗಿರಲಿಲ್ಲ. ಈಗ ಹಾಗಾಗುತ್ತಿಲ್ಲ. ಆಕಾಶ ತಲೆಯ ಮೇಲೆ ಕುಸಿದು ಬಿದ್ದಂತಾಗಿದೆ. ದುರ್ಘಟನೆ

ಬೆಟ್ಟದ ಮೇಲೊಂದು
ಬಂಡೆಯ ಅಗೆದು
ಗಿಡ ನೆಟ್ಟು ಹೂ
ಅರಳಿಸಿದವನ
ಹೃದಯದಲ್ಲಿ ಈಗ
ನೀರಿಗಾಗಿ ಹಾಹಾಕಾರ

**–ಮೂಚಿ**




ನಡೆದ ಹೊಸದರಲ್ಲಿ ಅದರ ಗಂಭೀರತೆ ಅರ್ಥವಾಗದಷ್ಟು ಮೆದುಳು ಮರಗಟ್ಟಿ ಹೋಗಿತ್ತು ಎನ್ನುವಂತೆ ಹಗೂರಕ್ಕೆ ಮನೆಯಲ್ಲಿ ಓಡಾಡಿಕೊಂಡಿದ್ದ ರಾಧಮ್ಮ ಕಾಲಕ್ರಮೇಣ ನಡೆದ ಘಟನಾವಳಿಗಳಿಂದ ಹಾಸಿಗೆ ಹಿಡಿಯುವ ಹಂತ ತಲುಪಿದರು. ನಿಶ್ಶಕ್ತಿ. ಮಲಗಿದಲ್ಲಿಂದ ಎದ್ದೇಳಲಾಗದ ಜಡತ್ವ. ಮೈಯಿಡೀ ಹಿಗ್ಗಾಮುಗ್ಗಾ ಚಚ್ಚಿಟ್ಟಂತೆ ನೋವು, ಯಾತನೆ. ಮಲಗಿ ಮಲಗಿ ಮೈಕೈ ನೋವು ಬಂದಿದ್ದಾ ಅಥವಾ ಮೈಕೈ ನೋವು ಬಂದು ಮಲಗಿದ್ದಾ ಅವರಿಗೇ ಗೊತ್ತಾಗದ ಪರಿಸ್ಥಿತಿ. ಇದು ಮತ್ತೆಂತದಲ್ಲ, ಮನೋರೋಗ ಎಂದು ಅರ್ಥ ಆಗದಷ್ಟು ದಡ್ಡ ಅಲ್ಲ ರಾಮಚಂದ್ರ. ಡಾಕ್ಟರ ಹತ್ತಿರ ಕರೆದುಕೊಂಡು ಹೋಗೋಣ ಅಂದುಕೊಂಡರೆ ಬಿಲ್ಕುಲ್ ಒಪ್ಪಲಿಲ್ಲ ರಾಧಮ್ಮ.

ಸಾಕು ಬದುಕಿದ್ದು. ನಂಗೆ ಸಾಕಾಗಿ ಹೋಗಿದೆ. ಇನ್ನು ಏನೇ ಆದ್ರೂ ಡಾಕ್ಟ್ರು, ಔಷ್ದಿ, ಮಾತ್ರೆ ಬೇಡ ನಂಗೆ. ಹೀಗೇ ಬಿದ್ದು ಹೋಗ್ಲಿ ಈ ಶರೀರ..

ಹೇಳಿದಷ್ಟು ಸುಲಭವಾ? ಹುಟ್ಟು ಅನ್ನುವುದು ಎಷ್ಟು ಸಂಕೀರ್ಣವೋ ಸಾವೂ ಕೂಡಾ ಅಷ್ಟೇ ಸಂಕೀರ್ಣ. ಜೀವಚ್ಛವದಂತೆ ವರ್ಷಗಟ್ಟಲೆ ಬದುಕಿದವರು ಎಷ್ಟು ಜನ ಇಲ್ಲ? ಸಾವಿಗೂ ಕೂಡಾ ಒಂದು ನಿಯಮ ಇದೆ. ಕ್ರಮ ಇದೆ. ಜೀವ ಎಷ್ಟೇ ಭಾರ ಅನಿಸಿದರೂ ಸಾವು ಅದಾಗಿ ಬಂದು ಆಲಿಂಗಿಸುವವರೆಗೆ ಕಾಯಬೇಕಾದ್ದು ಅನಿವಾರ್ಯ ಕರ್ಮ, ಕೈಯಾರೆ ಜೀವ ತೆಗೆದುಕೊಂಡು ಬೆಂತರವಾಗಿ ಅಲೆಯಬಾರದೆಂಬ ನಂಬಿಕೆ ಇರುವವರಿಗೆ..

★★★

ಮೆಟ್ಟಿಲ ಮೇಲಿಂದ ಎದ್ದ ರಾಮಚಂದ್ರ ಅಂಗಳದಲ್ಲಿ ವಿನಾಕಾರಣ ಮತ್ತೊಂದು ಸುತ್ತು ಹೊಡೆದ. ತನ್ನ ಹಿರೀಕರ, ತಾನೇ ಒಂದಿಗೆ ಬಾಳಿದ ಅಣ್ಣ ನಡೆದಾಡಿದ ಅಂಗಳ. ಈ ಮಣ್ಣಿನಲ್ಲಿ ಅವರೆಲ್ಲರ ಅದೆಷ್ಟು ಹೆಜ್ಜೆಗುರುತುಗಳು ಮೂಡಿ ಮರೆಯಾಗಿವೆಯೋ? ಯಾಕೋ ಆ ಮಣ್ಣನ್ನು ಕೈಯಿಂದ ಸ್ಪರ್ಶಿಸಬೇಕೆಂಬ ತೀವ್ರ ಬಯಕೆಯಾಯ್ತು. ಬಗ್ಗಿ ಒಂದು ಮುಷ್ಟಿ ಮಣ್ಣನ್ನು ಕೈಯಲ್ಲಿ ಹಿಡಿದು ಹಾಲುಬೆಳದಿಂಗಳಲ್ಲಿ ದಿಟ್ಟಿಸಿ ನೋಡಿದ. ನಾಳೆ ತನ್ನ ಹೆಜ್ಜೆಗುರುತುಗಳೂ ಹೀಗೆಯೇ ಹೇಳಹೆಸರಿಲ್ಲದೆ ನಾಶವಾಗಿ ಹೋಗುತ್ತವೆ. ಅಂದಮೇಲೆ ಬದುಕಿನ ಅರ್ಥ ಏನು? ಬದುಕಿರುವಷ್ಟು ದಿನ ಪರಸ್ಪರ ಹೊಂದಾಣಿಕೆಯಿಂದಿರದೆ ಯಾಕೆ ವೃಥಾ ಕಿತ್ತಾಟ, ದ್ವೇಷ, ಅಸೂಯೆ? ಅರಿಷಡ್ವರ್ಗಗಳನ್ನು ಮೈಯಿಡೀ ಆವಾಹಿಸಿಕೊಂಡು ಈ ಬದುಕೆನ್ನುವುದು ಶಾಶ್ವತ ಅನ್ನುವ ಹಾಗೆ ಯಾಕೆ ಬದುಕುತ್ತಾನೆ ಮನುಷ್ಯ? ಹಿಂದೆಯೇ ತಟಕ್ಕನೆ ಉತ್ತರವೂ ಹೊಳೆಯಿತು. ಈ ಕ್ಷಣ ಅನ್ನುವುದನ್ನು ನಿಜವೆನ್ನಿಸುವಂತೆ ಮಾಡುವುದೇ ಬದುಕಿನ ಮಾಯೆ. ಯಾರ್ಯಾರೋ ಸಾಯುತ್ತಿರುವುದನ್ನು ಕಣ್ಣಾರೆ ಕಂಡೂ ಅದು ತನ್ನ ಸಮೀಪಕ್ಕೆ ಬರಲು ಬಹು ಕಾಲ ಬೇಕು ಎಂದು ಭ್ರಮಿಸುವಂತೆ ಮಾಡುವುದೇ ಬದುಕಿನ ಮಾಯೆ. ಮಹಾ ತಿಳಿವಳಿಕಸ್ಥನಂತೆ ಇಷ್ಟೆಲ್ಲಾ ಯೋಚಿಸುತ್ತಿರುವ ತಾನು ಬದುಕಿನ ವಿವಿಧ ಹಂತಗಳಲ್ಲಿ ನಡೆದುಕೊಂಡ ಕ್ರಮ ಸರಿಯಾಗಿತ್ತಾ? ಮಾಯೆ ಅನ್ನುವುದು ಅಷ್ಟು ಪ್ರಬಲವಾಗಿದ್ದರೆ ಹುಲುಮನುಜ ಅದನ್ನು ಮೀರುವುದೆಂತು? ಗಾಳಿ ಬೀಸಿದತ್ತ ಸಾಗುವುದಷ್ಟೇ ಉಳಿದುಕೊಂಡಿರುವ ಮಾರ್ಗವೇ?

ಕೈಮುಷ್ಟಿಯಲ್ಲಿದ್ದ ಮಣ್ಣನ್ನು ಹೆಬ್ಬೆರಳು ಮೇಲಾಗುವಂತೆ ಹಿಡಿದು ಕಿರುಬೆರಳುಗಳೆಡೆಯಿಂದ ನಿಧನಿಧಾನವಾಗಿ ಜಾರಿಸತೊಡಗಿದ ರಾಮಚಂದ್ರ. ಯಾಕೋ ಅಣ್ಣನ ಮಗ ಪ್ರದೀಪನ ನೆನಪು ಬಂತು. ಇಲ್ಲಿಯ ಮಣ್ಣಿನಲ್ಲಿ ಬಿದ್ದು, ಎದ್ದು, ಆಡಿ ಬಾಲ್ಯ ಕಳೆದ ಹುಡುಗ. ಮಣ್ಣು ಅಂದರೆ ವಿಪರೀತದ ಆಕರ್ಷಣೆ. ಲೋಟದಲ್ಲಿ ನೀರು ಹಿಡಿದು ತಂದು ಮಣ್ಣು ಕಲೆಸಿ ಇದೇ ಹಲಸಿನಮರದ ಅಡಿಯಲ್ಲಿ ಅವನು ಸೃಷ್ಟಿಸುತ್ತಿದ್ದ ಕಲಾಕೃತಿಗಳೆಷ್ಟೋ? ಅದೇನು? ಎಂದು ಕೇಳಿದರೆ ಅವನೇ ಉತ್ತರಿಸಬೇಕು. ಸುರುಳಿಗೂದಲು ಹಣೆಯ ಮೇಲಾಡುತ್ತಿರಲು ಕುಕ್ಕರುಗಾಲಲ್ಲಿ ಕೂತು ಮಣ್ಣು ಮಿದಿಯುತ್ತಿದ್ದ ಎಳೆ ಬಾಲನಲ್ಲಿ ಅದಿನ್ನೆಂತಾ ತನ್ಮಯತೆ? ಈಗಿನ್ನೂ ಮೈ ತೊಳೆಸಿ ಒಗೆದ ಬಟ್ಟೆ ಹಾಕಿದ್ದಲ್ಲನೋ, ಶನಿ ಮುಂಡೇಗಂಡ.. ಅತ್ತಿಗೆ ಭವಾನಿ ಮಗನ ರಟ್ಟೆ ಹಿಡಿದು ದರದರನೆ ಎಳೆದುಕೊಂಡು ಹೋಗುತ್ತಿದ್ದಿದ್ದು ಕಣ್ಣಿಗೆ ಕಟ್ಟಿದಂತಿದೆ.

ಆಡ್ಕಳ್ಲಿ ಬಿಡೇ. ನಿನ್ನಪ್ಪನ ಗಂಟು ಕರಗುತ್ತಾ? ಸಿಡುಕುತ್ತಿದ್ದ ಅಣ್ಣ.

ಸೋಪು ತರ್ಬೇಕಾರೆ ಮೊನ್ನೆ ಇನ್ನೂ ಒಂದು ಬಾರು ತಂದಿದ್ದಲ್ಲನೇ ಅಂತೀರಲ್ಲ. ಆಗ ಇದೆಲ್ಲಾ ನೆನಪಾಗಲ್ವಾ? ಮಗನ ನಡವಳಿಕೆಯ ಹೆಳೆಯಲ್ಲಿ